ಶ್ರೀ ಕೆ. ಪುಟ್ಟಸ್ವಾಮಿ.—ಲಕ್ಷ್ಮೇಶ್ವರದಲ್ಲಿ ಪುರಸಭೆಗೆ ಸೇರಿದಂತಹ ಲೈಸರಿ ಕಟ್ಟಡ ಸುಮಾರು 73 ಸಾವಿರ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಅಂದಾಜು ಮಾಡಿದ್ದಾರೆ. ಹಳೆಯ ಬಿಲ್ಡಿಂಗ್ ಒಂದು ಲಕ್ಷ 72 ಸಾವಿರ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಅಂದಾಜು ಮಾಡಿದ್ದಾರೆ. ಅಲ್ಲಬಿದ್ದಿರುವ ಗೋಡೆಗೆ 28 ಸಾವಿರ ರೂಪಾಯಿಗಳ ಬೆಲೆಯನ್ನು ಅಂದಾಜು ಮಾಡಿದ್ದಾರೆ. ಅಲ್ಲಿರತಕ್ಕ ಹಳೆಯ ಕೋರ್ಟ್ ಬಿಲ್ಡಿಂಗ್ ನಮ್ಮ ವಂಡಿಯ ಪ್ರಕಾರ ಒಡೆದು ಹೋಗಿದೆ ಎಂದು ವರದಿ ಬಂದಿದೆ.

Distribution of lands amongst the Harijans and Girijans in Bidar District

223. Sri V. N. PATIL (Humnabad).—

Will the Minister for Revenue be pleased to state :—

(*a*) the number of acres of uncultivated land distributed amongst the Harijans and Girijans and landless Agricultural workers throughout the State from January 1969 to the end of November, 1969 ;

(*b*) the extent of land distributed in Bidar District amongst Harijans and Girjans and landless workers (the figures for each Taluk may please be given, the figures of the entire villages where lands so distributed and its extent in Humnabad Taluk may please be given separately) ;

(*c*) whether it has not come to the notice of the Government that in Bidar District, major portion of the parampoke has been occupied since the last 10 to 15 years by landless persons and they are paying Shivai Jamabandi to the Government ;

(*d*) whether the Government is going to distribute the land to those who are already in possession of the land for more than 10 years and are regularly paying Shivai Jamabandi ;

(*e*) if not, the difficulty in allotting land to those genuine landless persons who are occupying the same and are in possession for years ;

(*f*) whether there was any representation by way of a memorandum to the Chief Minister during his visit to Bidar District by the District Council of Communists of Bidar for the distribution of the lands to the landless persons ;

(*g*) if so, the steps the Government has taken for distribution of the land to the landless persons ?

Sri H. V. KOUJALGI (Minister for Revenue).—

(*a*) 20,386 acres.

(*b*) Area distributed in the following Taluka :—

1. Basawakalyan ... 338 acres

2.	Humnabad Taluka ...	332 acres
	(a) Dhumansur village	... 44 acres
	(b) Madergi village	... 44 ,,
	(c) Udbal village	... 244 ,,
	Total	... 332 acres

(*c*) Yes.

(*d*) There is no provision in the M.L.R. Act, 1964 to regularise such unauthorised occupation of Government lands. The question of making suitable provision is engaging attention.

(*e*) Does not arise in view of reply to clause (*d*).

(*f*) A memorandum addressed to the Chief Minister in the matter has been received by the Deputy Commissioner, Bidar.

(*g*) The Mysore Land Grant Rules, 1968 have been simplified and revised Land Grant Rules, *viz.*,. the Mysore Land Grant Rules, 1969 have come into force. In order to ensure speedy disposal of Government waste lands a Consultative Committee for each taluk is being formed.

Sri V. N. PATIL.—Answer to (*c*) is 'Yes'. May I know whether the Government will take a decision to bring in an amendment at the earliest, *i.e.*, in the coming Budget Session so that these people are sanctioned the land and their position is not disturbed ?

Sri H. V. KOUJALGI.—An amendment to Section 94 of the Mysore Land Revenue Act has already been issued.

ಶ್ರೀ ಎಸ್. ಎಸ್. ಅರಕೇರಿ.—1969ನೇ ಇಸವಿಯಲ್ಲಿ ಸುಮಾರು 20 386 ಎಕರೆ ಜಮೀನು ಗಳನ್ನು ಹರಿಜನ ಗಿರಿಜನರಿಗೆ ಮತ್ತು ರ್ಯಾಂಡ್‌ಲೆಸ್ ಕೆಲಸಗಾರರಿಗೆ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಇವರಲ್ಲಿ ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ, ಗಿರಿಜನರಿಗೆ ಮತ್ತು ಲ್ಯಾಂಡ್‌ಲೆಸ್ ಇತರ ಜನರಿಗೆ ಎಷ್ಟು ಕೊಟ್ಟಿದ್ದೀರೆಂದು ಹೇಳಬಹುದೇ ?

ಶ್ರೀ ಎಚ್. ವಿ. ಕೌಜಲಗಿ.—ಆ ವಿವರ ನಮ್ಮ ಕಡೆ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ 20,386 ಎಕರೆಗಳನ್ನು ಭೂಹೀನ ರಿಗೆ ಮತ್ತು ನಿರ್ವತಿಕ ಬಡವರಿಗೆ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆಂದು ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಬೆಂಗಳೂರು ಜಿಲ್ಲೆ 441 ಎಕರೆ, 35 ಗಂಟೆ. ಬೆಳಗಾಂ-238 ಎಕರೆ, ಬಳ್ಳಾರಿ-1520, ಬಿದರ್-620, ಬಿಜಾಪುರ-107, ಕೊಡಗು-1020, ಚಿಕ್ಕ ಮಗಳೂರು-1285, ಚಿತ್ರದುರ್ಗ-925, ಧಾರವಾಡ-118, ಗುಲ್ಬರ್ಗ-269, ಹಾಸನ-1082, ಕೋಲಾರ-1393, ಮಂಡ್ಯ-1 00, ಮೈಸೂರು-4,498, ಉತ್ತರ ಕನ್ನಡ-133 ಶಿವಮೊಗ್ಗ-1081, ದಕ್ಷಿಣ ಕನ್ನಡ-1414, ತುಮಕೂರು-1621, ಮತ್ತು ರಾಯಚೂರು-1578.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಉತ್ತರದಲ್ಲಿ ತಾವು ಜಮೀನುಗಳನ್ನು ಹಂಚುವುದಕ್ಕೆ ಒಂದು ಕನ್‌ಸಲ್ಟೇಟಿವ್ ಕಮಿಟಿ ಮಾಡುತ್ತೇವೆಂದು ಹೇಳಿದ್ದೀರಿ. ಈ ಕಮಿಟಿ ಯಾವ ಆಧಾರದ ಮೇಲೆ ಮಾಡುತ್ತೀರಿ ? ಮತ್ತು ಅದರಲ್ಲಿ ಎರಾ ಪಕ್ಷದವರನ್ನು ಸೇರಿಸುವುದಕ್ಕೆ ತೀರ್ಮಾನ ಕೈಗೊಳ್ಳುತ್ತೀರಾ, ಕೈಗೊಂಡಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಸರ್ವೇಸಾಮಾನ್ಯವಾಗಿ ಆ ತಾಲ್ಲೂಕಿನ ಎಂ.ಎಲ್.ಎ. ಟಿ.ಡಿ.ಬಿ ಪ್ರೆಸಿಡೆಂಟ್, ಟಿ.ಡಿ.ಬಿ. ಯ ಒಬ್ಬ ಹರಿಜನ ಸದಸ್ಯ ಅಥವಾ ಕೌನ್ಸಿಲ್ ಮೆಂಬರನ್ನು ತೆಗೆದುಕೊಳ್ಳಬೇಕೆಂಬ ವಿಚಾರ ಇದೆ.

Sri G. C HANDRAKANTH.—May I know the extent of uncultivated land in Bidar and the number of applications which require early disposal?

Sri H. V. KOUJALGI.—It does not arise out of this question.

ಶ್ರೀ ಕೆ. ಎಚ್. ರಂಗನಾಥ್.—(ಇ) ಕಳೆದ 10-15 ವರ್ಷಗಳಿಂದ ಬೀದರ್ ಜಿಲ್ಲೆಯ ಪರಮಿಬೋಕೆನ ಹೆಚ್ಚಿನ ಭಾಗವನ್ನು ಭೂಹೀನರು ವಶಪಡಿಸಿಕೊಂಡಿದ್ದು ಅವರು ಸರ್ಕಾರದವರಿಗೆ ಶಿವಾಯಾ ಜಮಾಬಂದಿ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೀರಿ. ಹಾಗಾದರೆ ಇದಕ್ಕೆ ಏನು ಅರ್ಥ ಎಂದು ಹೇಳುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಹೌದು, ಅವರು ಸರ್ಕಾರಕ್ಕೆ ಶಿವಾಯಾ ಜಮಾಬಂದಿ ಕೊಡುತ್ತಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಡಿಸ್ಪೋಸಲ್ ಆಫ್ ವೇಸ್ಟ್ ಲ್ಯಾಂಡ್ ಮಾಡಬೇಕೆಂದು ಹೇಳಿದ್ದೀರಿ. ಬಿದರ್ ಜಿಲ್ಲೆ ಮತ್ತು ಇತರ ಜಿಲ್ಲೆಗಳಲ್ಲಿ ಎಷ್ಟು ಲ್ಯಾಂಡ್ ಇದೆ, ಎಷ್ಟು ಜನರಿಗೆ ಕೀಗೆ ಕೊಟ್ಟಿದ್ದೀರಿ ಮತ್ತು ಜಮೀನು ಇಲ್ಲದಿರತಕ್ಕ ಬಡ ಜನರು ಎಷ್ಟು ಇದ್ದಾರೆ ಎಂದು ಸ್ಟಾಟಿಸ್ಟಿಕ್ ಗ್ಯಾದರ್ ಮಾಡಿದ್ದೀರಾ, ಹೇಳುತ್ತೀರಾ?

ಶ್ರೀ ಹೆಚ್. ವಿ. ಕೌಜಲಗಿ.—ಎಷ್ಟು ಜಮೀನು ಇದೆ ಎಂದರೆ, ನಮಾರು 11 ಲಕ್ಷ ಎಕರೆ ಇದೆಯೆಂದು ಕಾಣುತ್ತದೆ. ಅದರೊಳಗೆ ಕಲ್ಟಿವೇಬಲ್ ಎಷ್ಟು ಎಂದು ಲೆಕ್ಕ ತೆಗೆದುಕೊಳ್ಳುವುದಕ್ಕೆ ಹೆಚ್ಚಿದ್ದೇವೆ ಎಷ್ಟು ಬಡಜನರು ಇದ್ದಾರೆಂದು ಗೊತ್ತಿಲ್ಲ. ಇನ್ನುಮೇಲೆ ಅರ್ಜಿಗಳು ಬಂದಾಗ ತಿಳಿಯುತ್ತದೆ.

ಶ್ರೀ ಬಾಪು ಗೌಡ.—ಈಗ ಭೂಮಿ ಇಲ್ಲದವರಿಗೆ ಸಾಪಿರಾರು ಎಕರೆ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇವುಗಳನ್ನು ಹರಿಜನ ಗಿರಿಜನರು ಪಡೆದುಕೊಂಡು ಬೇರೆ ಜಮೀನುದಾರರಿಗೆ ಕೆಲವರು ಮಾರುತ್ತಾರೆ. ಹೀಗೆ ಇದನ್ನು ಮಾರಿದರೆ, ಜಮೀನ್ದಾರರು ಕೊಂಡುಕೊಳ್ಳದ ಹಾಗೆ ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಈಗ ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಆ ಪ್ರೊವಿಜನ್ ಇದೆ. ಭೂಮಿ ಕೊಟ್ಟ ನಂತರ 15 ವರ್ಷಗಳ ಒಳಗೆ ಅದನ್ನು ಯಾರಿಗೂ ಸರ್ಕಾರದ ಪರವಾನೆ ಇಲ್ಲದೆ ವಿಲೇವಾರಿ ಮಾಡಬಾರದು ಎಂದು ಎದೆ.

ಶ್ರೀ ಎಂ. ನಾಗಪ್ಪ.—ತಾವು ಉತ್ತರದಲ್ಲಿ ಶಿವಾಯಾ ಜಮಾಬಂದಿ ಕೊಡುತ್ತಿದ್ದಾರೆಂದು ಜಮೀನು ಅವರ ಸ್ವಾಧೀನದಲ್ಲಿದೆಯೆಂದೂ ಹೇಳಿದ್ದೀರಿ. ಈ ರೀತಿ ಎಷ್ಟು ಕುಟುಂಬಗಳು ಇದ್ದಾವೆ, ಎಷ್ಟು ಜಮೀನು ಅವರ ಸ್ವಾಧೀನದಲ್ಲಿವೆ ಎಂಬುದನ್ನು ತಿಳಿಸಬೇಕು. ಅದಲ್ಲದೆ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್‌ನಲ್ಲಿ 15 ವರ್ಷದವರೆಗೆ ಸರ್ಕಾರದ ಪರವಾನೆ ಇಲ್ಲದೆ ಮಾರಕೂಡದು ಎಂದು ಹೇಳಿದ್ದೀರಿ. ಅಂದರೆ ಸರ್ಕಾರ ಪರವಾನೆ ಕೊಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದಾರೆಯೇ! ಆ ಉದ್ದೇಶ ಇಲ್ಲದಿದ್ದರೆ ಆ ಕ್ಲಾಸಿಗೆ ತಿದ್ದುಪಡಿಮಾಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಇವರು ಎಷ್ಟು ಮಂದಿ ಇದ್ದಾರೆ ಎಂಬುದರ ವಿವರ ಇಲ್ಲ. 2ನೇ ಪ್ರಶ್ನೆ ಸರ್ಕಾರ ಪರವಾನೆ ಯಾಕೆ ಕೊಡುತ್ತದೆ ಎಂದು. ಒಮ್ಮೊಮ್ಮೆ ಬಡವರಾದ ಜನಕ್ಕೆ ಜಮೀನು ಮಾರಾಟ ಮಾಡಿ ಬೇರೆ ತೆಗೆದುಕೊಳ್ಳುವುದರ ಅವಶ್ಯಕತೆ ಬೀಳುತ್ತದೆ. ಅದು ಸರ್ಕಾರೀ ಕಾಯಿದೆಯ ಪ್ರಕಾರ ಜಿನ್ಯೂಯಿನ್ ಆಗಿದ್ದರೆ, ಅಂಥವರಿಗೆ ಪರವಾನೆ ಕೊಡುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಳೆ.—ರಾಜಕೀಯ ಸಂತ್ರಸ್ತರಿಗೆ ಎಷ್ಟು ಎಕರೆ ಭೂಮಿ ಕೊಟ್ಟಿದ್ದೀರಿ?

ಶ್ರೀ ಎಚ್. ವಿ. ಕೌಜಲಗಿ.—ಅದು ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರೀ ವಿ. ಎನ್. ಪಾಟೀಲ್.—(ಎಫ್)ನಲ್ಲಿ ನಾನು ಕೇಳಿದ್ದು ಬೀದರ್ ಜಿಲ್ಲೆಯ ಕಮ್ಯುನಿಸ್ಟ್ ನಮಿತಿಯವರು ಏನಾದರೂ ಮನವಿಯನ್ನು ಸಲ್ಲಿಸಿದ್ದರೇ ಎಂದು. ಅದಕ್ಕೆ ಉತ್ತರದಲ್ಲಿ ಒಂದು

ಕನ್‌ಸ್ಟ್ರೆಕ್ಟಿವ್ ಕಮಿಟಿ ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ ಎಷ್ಟು ದಿವಸಗಳಲ್ಲಿ ಇದನ್ನು ಮಾಡುತ್ತೀರಿ? ಮತ್ತು ನಾನು ಹುಮ್ನಾಬಾದ್ ತಾಲ್ಲೂಕಿನ ಮಾಹಿತಿ ಕೇಳಿದ್ದು. ನೀವು ಜಿಲ್ಲಾವಾರು ಕೊಟ್ಟಿದ್ದೀರಿ.

ಶ್ರೀ ಎಚ್. ವಿ. ಕೌಜಲಗಿ.—ಕಮಿಟಿಗಳನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

Misappropriation of Funds of Relief Works in Arkalgud

229. Sri H. N. NANJE GOWDA (Arkalgud).—

Will the Minister for Revenue be pleased to refer to his replies given to Starred question No. 106 of the Sixth list on 21st August 1969 and state :—

(*a*) whether the investigation in the matter by the Technical Audit cell of the Vigilance Commission has been completed ;

(*b*) if so, the recommendations of the Vigilance Commission in the matter ;

(*c*) whether any of the officials are kept under suspension or dismissed from service for misappropriating the funds of the relief works by drawing the amount on bogus and fantastic bills ?

Sri H. V. KOUJALGI (Minister for Revenue).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಎಚ್. ಎನ್. ನಂಜೇಗೌಡ.—ಡಿವಿಜನಲ್ ಕಮಿಷನರ್ ಸರ್ಕಾರಕ್ಕೆ ಕೊಟ್ಟಂತಹ ವರದಿಯಲ್ಲಿ ಯಾರನ್ನಾದರೂ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕೆಂದು ತಿಳಿಸಿದ್ದಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಆ ವರದಿ ಇನ್ನೂ ನಮ್ಮ ಕಡೆ ಬಂದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ತಾವು ವರದಿ ಬಂದಿಲ್ಲವೆಂದು ಹೇಳುತ್ತೀರಿ,... ... ...

Sri H. V. KOUJALGI.—It has not come to my notice ; I will enquire into it.

Sri H. N. NANJE GOWDA.—Have you not disclosed to this House on a previous occasion that the Report from the Divisional Commissioner was received by the Government ?

Sri H. V. KOUJALGI.—I do not know the contents of it at this stage.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಮೈಸೂರು ಡಿವಿಜನಲ್ ಕಮಿಷನರ್ ಅವರು ಈ ವ್ಯವಹಾರದಲ್ಲಿ ತೊಡಗಿದ್ದಂಥ ಅಧಿಕಾರಿಗಳು ಅನ್ಯಾಯ ಮಾಡಿದ್ದಾರೆ. ಇದರಲ್ಲಿ ಪೋಸ ಇದೆಯೆಂದು ತಿಳಿದುಬಂದುದರಿಂದ ಅವರನ್ನು ಸಸ್‌ಪೆಂಡ್ ಮಾಡಬೇಕೆಂದು ವರದಿಯನ್ನು ಕಳುಹಿಸಿದ್ದಾರೆಯೇ?

Sri H. V. KOUJALGI.—I do not exactly remember its contents.